ನಂದಾದೀಪ

# ಜನಪ್ರಿಯ ಅನುವಾದಕ ಕೆ.ಕೆ. ಗಂಗಾಧರನ್



**ಮೋಹನ ಕುಂಟಾರ್**

ಅನುವಾದವನ್ನೇ ಉಸಿರಾಡುತ್ತಿದ್ದ ಅನುವಾದಕ ಕೆ.ಕೆ. ಗಂಗಾಧರನ್ ಇಹಲೋಕ ಯಾತ್ರೆ ಪೂರೈಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಬರವಣಿಗೆಯಲ್ಲಿ ತೊಡಗಿಸಿಕೊಂಡ ಹೊಸಬರಲ್ಲಿ ಯುವ ಲೇಖಕರು ಅನೇಕರಿದ್ದಾರೆ. ಆದರೆ ಅನುವಾದ ಕ್ಷೇತ್ರದಲ್ಲಿ ಕಿರಿಯ ಅನುವಾದಕರ ಪ್ರವೇಶ ತೀರಾ ವಿರಳವಾಗುತ್ತಿರುವ ಸಂದರ್ಭದಲ್ಲಿ ಕೆ.ಕೆ. ಗಂಗಾಧರನ್ ಅವರಂತಹ ಹಿರಿಯರ ನಿರ್ಗಮನ ಮಲಯಾಳಂ ಕನ್ನಡ ಅನುವಾದ ಕ್ಷೇತ್ರದಲ್ಲಿ ದೊಡ್ಡದಾದ ನಿರ್ವಾತವನ್ನು ಉಂಟುಮಾಡಿದೆ. ಸುಮಾರು ನಾಲ್ಕು ದಶಕಗಳ ಸುದೀರ್ಘ ಅವಧಿಯಲ್ಲಿ ಅವರು ಮಲಯಾಳಂನಿಂದ ಕನ್ನಡಕ್ಕೆ ಅನೇಕ ಲೇಖಕರ ರಚನೆಗಳನ್ನು ಅನುವಾದಿಸಿದ್ದಾರೆ.

ಕಾಸರಗೋಡಿನ ಪಾತನಡ್ಕ ಎಂಬಲ್ಲಿ 1949ರ ಮಾರ್ಚ್ 10ರಂದು ಜನಿಸಿದ ಗಂಗಾಧರನ್ ಅವರ ಹೆತ್ತವರು ಬದುಕು ಕಟ್ಟಿಕೊಳ್ಳಲು ಆಶ್ರಯಿಸಿದ್ದು ಕೊಡಗಿನ ಸೋಮವಾರಪೇಟೆಯ ಸಮೀಪದ ಕಬ್ಬಿಣದ ಸೇತುವೆ ಎಂಬ ಊರನ್ನು. ಸೋಮವಾರಪೇಟೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಅವರು ಕಲಿತದ್ದು ಕನ್ನಡ ಭಾಷೆಯನ್ನು. ಮನೆಮಾತು ಮಲಯಾಳಂ. ಎರಡು ಭಾಷೆಗಳನ್ನು ಬಲ್ಲ ಗಂಗಾಧರನ್ ಅವರನ್ನು ಅನುವಾದ ಕ್ಷೇತ್ರ ಇನ್ನಿಲ್ಲದಂತೆ ಸೆಳೆಯಿತು. ಕನ್ನಡದಲ್ಲಿ ಕೇಳಿಸಿಕೊಂಡಿದ್ದನ್ನು ಮಲಯಾಳಂನಲ್ಲಿ ಹೇಳುವ ಮಲಯಾಳಂನಲ್ಲಿ ಗೊತ್ತಿದ್ದುದನ್ನು ಕನ್ನಡದಲ್ಲಿ ಹೇಳುವುದು ಒಂದು ವಿನೋದವೇ ಆಗಿತ್ತು. ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ಕಲಿತುದನ್ನು ಕುತೂಹಲಕ್ಕೆ ಕನ್ನಡದಲ್ಲಿ ಹೇಳುವುದು. ಹೀಗೆ ಅನುವಾದ ಕೌಶಲವೊಂದು ಗಂಗಾಧರನ್‌ಗೆ ಕರಗತವಾಗಿತ್ತು.

ಹಾಗೆಯೇ ಉನ್ನತ ಸ್ಥಾನವನ್ನೇರಲು ಅವರಿಗೆ ಅನುವಾದ ಕ್ಷೇತ್ರ ಸುಲಭದ ಹಾದಿಯಾಗಿರಲಿಲ್ಲ. 1983ರಿಂದಲೇ ಬಿಡಿ ಬಿಡಿಯಾದ ಲೇಖನಗಳನ್ನು ಅನುವಾದ ಮಾಡುತ್ತಿದ್ದ ಗಂಗಾಧರನ್ ಅವರು ಮೊದಲ ಅನುವಾದ ಪುಸ್ತಕ ರೂಪದಲ್ಲಿ